I3PNTH

# 1. ಯಾವುದು ಇಷ್ಟ

**ಗುರುಗಳು** : ಹೇಳೆ ಗಂಗಾ, ಹೇಳೆ ಗಂಗಾ
ಯಾವ ಕಾಲವು ಇಷ್ಟ ?
ನಿನಗೆ ಯಾವ ಕಾಲವು ಇಷ್ಟ ?

**ಗಂಗಾ** : ದಿನವಿಡೀ ಆಡಲು ನೀರನು ಸುರಿಸುವ
ಪೇಟೆಗೆ ಹೋಗಲು ಕೊಡೆಯನು ಹಿಡಿಸುವ
ಮಳೆಗಾಲವೆ ಇಷ್ಟ
ನನಗೆ ಮಳೆಗಾಲವೆ ಇಷ್ಟ



**ಗುರುಗಳು** : ಹೇಳೆ ತುಂಗಾ, ಹೇಳೆ ತುಂಗಾ
ಯಾವ ಕಾಲವು ಇಷ್ಟ ?
ನಿನಗೆ ಯಾವ ಕಾಲವು ಇಷ್ಟ ?

**ತುಂಗಾ** : ಬೆಚ್ಚನೆ ಬಟ್ಟೆಯ ತೊಡಿಸಲು ಬರುವ
ಬಿಸಿ ಬಿಸಿ ಬೆಳಸಿಯ ತಿನ್ನಲು ಬರುವ
ಚಳಿಗಾಲವೆ ಇಷ್ಟ
ನನಗೆ ಚಳಿಗಾಲವೆ ಇಷ್ಟ

**ಗುರುಗಳು** : ಹೇಳೊ ರಂಗಾ ಹೇಳೊ ರಂಗಾ
ಯಾವ ಕಾಲವು ಇಷ್ಟ ?
ನಿನಗೆ ಯಾವ ಕಾಲವು ಇಷ್ಟ ?

**ರಂಗಾ** : ನೇರಲ, ಮಾವಿನ ಹಣ್ಣನು ಕೊಡುವ
ಆಟಕೆ ನಮಗೆ ಬಿಡುವನು ತರುವ
ಬೇಸಿಗೆ ಕಾಲವೆ ಇಷ್ಟ
ನನಗೆ ಬೇಸಿಗೆ ಕಾಲವೆ ಇಷ್ಟ



**ಮಕ್ಕಳು** : ಹೇಳಿರಿ ಗುರುಗಳೆ, ಹೇಳಿರಿ ಗುರುಗಳೆ
ಯಾವ ಕಾಲವು ಇಷ್ಟ ?
ನಿಮಗೆ ಯಾವ ಕಾಲವು ಇಷ್ಟ ?

**ಗುರುಗಳು** : ಆಟಕೆ ಊಟಕೆ ನೀರನು ಕೊಡುವ
ಬೆಚ್ಚನೆ ಉಡುಗೆ ತೊಡಿಸಲು ಬರುವ
ತಿನ್ನಲು ಸವಿ ಸವಿ ಹಣ್ಣನು ತರುವ
ಮೂರು ಕಾಲಗಳಿಷ್ಟ
ನನಗೆ ಮೂರು ಕಾಲಗಳಿಷ್ಟ





**ಶಬ್ದಗಳ ಅರ್ಥ :**

ಇಷ್ಟ – ಪ್ರೀಯವಾದ ; ಪೇಟೆ – ಮಾರುಕಟ್ಟೆ ; ಬೆಳಸಿ – ರಸ ತುಂಬಿದ ಕಾಳು, ಎಳೆಯ ಕಾಳು.

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

  ಸುರಿಸು – ................ ; ಕೊಡೆ – ................ ; ಸವಿ – .................

## ಅಭ್ಯಾಸ

**ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ಕೊಡೆಯು ಯಾವ ಕಾಲವನ್ನು ನೆನಪಿಸುತ್ತದೆ ?

ಉತ್ತರ ..............................................................................

ಆ) ಬೆಳಸಿ ಸಿಗುವ ಕಾಲ ಯಾವುದು ?

ಉತ್ತರ ..............................................................................

ಇ) ಬೇಸಿಗೆ ಕಾಲದಲ್ಲಿ ದೊರೆಯುವ ಹಣ್ಣುಗಳಾವವು ?

ಉತ್ತರ ..............................................................................

ಈ) ಗುರುಗಳಿಗೆ ಇಷ್ಟವಾದ ಕಾಲಗಳು ಯಾವುವು?

ಉತ್ತರ ..............................................................................

**ಪ್ರಶ್ನೆ 2) ಬರುವ – ತರುವ ಈ ಉದಾಹರಣೆಯಂತಿರುವ ಅಂತ್ಯಪ್ರಾಸದ ಜೋಡಿಗಳನ್ನು ಬರೆಯಿರಿ.**

**ಪ್ರಶ್ನೆ 3) ಮಳೆಗಾಲದಲ್ಲಿ ನಿಮಗೆ ಬಂದ ಸವಿ ಅನುಭವಗಳನ್ನು ಬರೆಯಿರಿ.**

..............................................................................

..............................................................................

..............................................................................

..............................................................................

**ಪ್ರಶ್ನೆ 4) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**

| ಮಳೆಗಾಲದಲ್ಲಿಧರಿಸುವ ಉಡುಪುಗಳು | ಚಳಿಗಾಲದಲ್ಲಿ ಧರಿಸುವ ಉಡುಪುಗಳು | ಬೇಸಿಗೆ ಕಾಲದಲ್ಲಿ ಧರಿಸುವ ಉಡುಪುಗಳು |
|---|---|---|
| | | |

**ಉಪಕ್ರಮ :** ಬೇಸಿಗೆ ಕಾಲದಲ್ಲಿ ಅರಳುವ ಹೂವುಗಳ ಹೆಸರುಗಳನ್ನು ಬರೆಯಿರಿ.